## ಯಶಸ್ಸಿನೆಡೆಗೆ ಪ್ರಯತ್ನ

**ಸಂಪಾದಕೀಯ**

ಜೀವನದಲ್ಲಿ 'ಫಸ್ಟ್ ಟೈಮ್' ಎಂಬ ಪದಕ್ಕೆ ಬಹಳ ಅರ್ಥವಿದೆ. ಮೊದಲ ಬಾರಿ ಮಾಡಿದ ಪ್ರತಿಯೊಂದು ಕೆಲಸಗಳ ಹಿಂದೆಯೂ ಮರೆಮಾಚದ ನೆನಪುಗಳಿರಬಹುದು. ಪ್ರತಿ ಕೆಲಸವನ್ನು ಹಲವಾರು ಬಾರಿ ಮಾಡಿ ಅನುಭವ ಹೆಚ್ಚಾದ ನಂತರ ಅದನ್ನು ಮೊದಲ ಬಾರಿ ಮಾಡಿದ ಅನುಭವವನ್ನು ಮೆಲುಕು ಹಾಕಲು ಸಂತಸ. ಆ ದಿನಗಳ ಮುಗ್ಧತೆ, ಉತ್ಸಾಹ, ಶ್ರದ್ಧೆ ಎಲ್ಲಾ ಕಣ್ಣ ಮುಂದೊಮ್ಮೆ ಹಾದುಹೋದಂತಾಗುತ್ತದೆ. ಮೊದಲ ಬಾರಿ ಶಾಲೆಗೆ ಹೋದ ನೆನಪು, ಮೊದಲ ಬಾರಿ ಕಂಡ ಬಣ್ಣದ ಚಿಟ್ಟೆ, ಮೊದಲ ಬಾರಿ ದಿಟ್ಟಿಸಿ ನೋಡಿದ ಕಾಮನಬಿಲ್ಲು, ಮೊದಲ ಪ್ರೀತಿಯ ಗುರುಗಳು, ಮೊದಲ ಕಾಲೇಜು, ಮೊದಲ ಪಾಕೆಟ್ ಮನಿ, ಮೊದಲ ಪ್ರೀತಿ, ಮೊದಲ ಕೆಲಸ ಹೀಗೆ ಜೀವನದ ಪ್ರತಿಯೊಂದು 'ಫಸ್ಟ್'ಗಳನ್ನು ಅನುಭವಿಸಿದಾಗ ಮಾತ್ರ ಜೀವನ ಸಾರ್ಥಕ. ಇತ್ತೀಚೆಗೆ ಹೀಗೊಂದು ಮೊದಲ ಅನುಭವವಾಯಿತು. 'ನಿಮ್ಮ ಪತ್ರಿಕೆ' ಎಂಬ ವ್ಯಾಖ್ಯಾನ 'ನಮ್ಮ ಪತ್ರಿಕೆ' ಎಂದು ಬದಲಾಗಿ ಅದಕ್ಕೊಂದು ಹೊಸ ರೂಪ ಸೃಷ್ಟಿಸಿ ಹೊರತಂದ ಅನುಭವ. ಕಳೆದ ಒಂದು ವರ್ಷದಿಂದ ಹಿರಿಯ ವಿದ್ಯಾರ್ಥಿಗಳು ನಡೆಸುತ್ತಿದ್ದ 'ವಿಕಸನ'ವನ್ನು ನಮ್ಮ ಜವಾಬ್ದಾರಿಗೆ ವಹಿಸಿಕೊಟ್ಟಾಗ ಸಂತೋಷದೊಂದಿಗೆ, ನಿರ್ವಹಣೆಯ ಸಣ್ಣ ಅಳುಕೊಂದು ಕಾಡಿತ್ತು. ಆದರೆ ನಮ್ಮ ತರಗತಿಯವರಿಂದ ಪತ್ರಿಕೆಯ ಮೊದಲ ಪ್ರತಿಯೊಂದು ಬಿಡುಗಡೆಯಾದಾಗ ಒಮ್ಮಿಂದೊಮ್ಮೆಲೆ ಉತ್ತುಂಗಕ್ಕೇರುವ ಮೊದಲ ಹೆಜ್ಜೆಗೆ ಇಂಬು ನೀಡಿದ ಸಾರ್ಥಕತೆ. ವಿಕಸನ ಪತ್ರಿಕೆಯ ಪ್ರವರ್ತಕರಾದ ನಮ್ಮ ಹಿರಿಯ ವಿದ್ಯಾರ್ಥಿಗಳೊಂದಿಗೆ ಕಳೆದ ವರ್ಷ ಸಲ್ಪ ಮಟ್ಟಿನಲ್ಲಿ ತೊಡಗಿಸಿಕೊಂಡ ಕಾರಣವೋ ಏನೋ ಎಲ್ಲವನ್ನೂ ಮೊದಲಿನಿಂದ ಹೊಸತಾಗಿ ಕಲಿಯುವ ಪ್ರಮೇಯ ಬರಲಿಲ್ಲ. ಎಳೆಯ ಮಗು ಅಂಬೆಗಾಲಿಡುವ ಸಂದರ್ಭದಲ್ಲಿ ಬಿದ್ದಾಗ, ಹೆತ್ತವರು ಕೈಹಿಡಿದು ಮೇಲೆತ್ತಿ, ನಡೆಯಲು ಪ್ರೇರೇಪಿಸುತ್ತಾರೆ. ಆ ಮೊದಲ ಹೆಜ್ಜೆಗಳ ಸವಿ ಗುರುತು ಮಾಸದೆ ಉಳಿಯುವಂತೆ ಜೀವನದ ಎಲ್ಲಾ ಮೊದಲ ಪ್ರಯತ್ನಗಳು ಯಶಸ್ಸಿನೆಡೆಗೆ ಸಾಗಿಸುವಂತಾಗಬೇಕು. ಮೊದಲ ಪ್ರಯತ್ನದಲ್ಲೇ ಸೋಲೊಪ್ಪಿಕೊಳ್ಳುವ ಮನೋಧರ್ಮ ಎಂದಿಗೂ ಸಲ್ಲದು. ಪ್ರಸ್ತುತ ಸಮಯದಲ್ಲಂತೂ ಸ್ಪರ್ಧಾತ್ಮಕ ಸಂದರ್ಭಗಳು ಪ್ರತಿ ಕಡೆ ಅಡ್ಡಗಟ್ಟುತ್ತವೆ. 'ಈಸಬೇಕು, ಇದ್ದು ಜೈಸಬೇಕು', ಎಂಬಂತೆ ಶ್ರಮ ಸದಾ ಇರಬೇಕು. ಇದರಂತೆ ಮೊದಲ ಪ್ರಯತ್ನ ವಿಫಲವಾದರೆ ಕಾರ್ಯ ಕೈಬಿಡಬಾರದು. ಮೊದಲ ಸೋಲಿನ ನಂತರ ಕ್ಷಣ ಕ್ಷಣದ ಯತ್ನವೂ ಕೂಡಾ ಉನ್ನತಿಯ ಸಂಕೇತ. ಹಾಗಾಗಿ ಮೊದಲ ಸೋಲಿಗೆ ತಲೆಬಾಗಿ ಕೂರಬಾರದು. ಮೊದಲ ಬಾರಿ ಕಂಡ ವ್ಯಕ್ತಿಗಳೊಡನೆ ಸಂವಾದ, ಪರಿಶ್ರಮದ ಕೆಲಸ. ಅವರ ಇಚ್ಛೆ, ಇರಾದೆಗಳಿಗೆ ಅನುಗುಣವಾಗಿ ಸಂಭಾಷಣೆ ಇರಬೇಕು. ಈ ವರ್ಷದ ಮೊದಲ ವಿಕಸನ ನಿಮ್ಮ ಮುಂದಿದೆ. ಈ ಬಾರಿಯ ಪತ್ರಿಕೆಯಲ್ಲಿ, ಒಂದು ಸಣ್ಣ ಬದಲಾವಣೆಯೊಂದಿಗೆ ಕಾಲೇಜಿನ ಪ್ರತಿಯೊಂದು ಬೆಳವಣಿಗೆಯ ಮಾಹಿತಿ ನಿಮಗೆ ಒದಗಿಸುವ ಪ್ರಯತ್ನ ಮುಂದುವರಿಯುತ್ತದೆ. 'ಗೋಲಿ ಮಾರೋ' ಅಂಕಣದ ಬದಲಾಗಿ 'ಪಂಚ್ ನಾಮ' ಎಂಬ ಹೊಸ ಅಂಕಣ ಪ್ರಾರಂಭವಾಗಿದೆ. ನಿಮ್ಮ ಮನಸಲ್ಲೂ ಪಂಚ್ ಹೊಡೆಯುವ ಪಂಚ್‌ನಾಮಗಳಿದ್ದರೆ ಪತ್ರಿಕೆಯ ಮಿಂಚಂಚೆಗೆ ಕಳುಹಿಸಬಹುದು.

– ಸಂಪಾದಕಿ

**ನಿಮಗನಿಸಿದ್ದು...**

### ಶ್ರಮಪಟ್ಟ ವಿಕಸನ

ಕಳೆದ ಒಂದು ವರ್ಷದಿಂದ ವಿಕಸನ ಪತ್ರಿಕೆಯನ್ನು ಗಮನಿಸಿದ್ದೇನೆ. ವಿಭಿನ್ನವಾಗಿ, ನಮ್ಮ ಸಂಸ್ಥೆಯ ಕಾರ್ಯಕ್ರಮಗಳನ್ನೂ, ವಿದ್ಯಾರ್ಥಿಗಳ ಪಾರದರ್ಶಕ ಬೆಳವಣಿಗೆಯನ್ನೂ ಪ್ರಕಟಿಸುತ್ತಿದೆ. ವಿಶೇಷ ಸಂಚಿಕೆಗಳಿಂದ ಎಲ್ಲರಿಗೂ ಸಂಗತಿ ಮುಟ್ಟಿಸುವ ಪ್ರಯತ್ನ ಉತ್ತಮ. ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪತ್ರಿಕೆಯಾಗಿ, ಅವರನ್ನು ಸೃಜನಶೀಲ ಬರಹಗಾರರನ್ನಾಗಿ ರೂಢಿಸಲು ಇದು ಸಹಕಾರಿ ಎಂಬುದು ನನ್ನ ನಂಬಿಕೆ. ಇನ್ನಿತರ ಕಾರ್ಯಕ್ರಮಗಳನ್ನು ನಡೆಸುತ್ತಾ, ಶ್ರಮಪಟ್ಟು ಪತ್ರಿಕೆ ನಡೆಸುತ್ತಿರುವ ವಿಭಾಗಕ್ಕೆ ಧನ್ಯವಾದಗಳು. ಪ್ರಯತ್ನ ಮುಂದುವರಿಯಲಿ.

ಶ್ರವಣ್ ಭಂಡಾರ್‌ಕರ್
ತೃತೀಯ ಬಿ.ಕಾಂ'ಸಿ'

## ಪಂಚ್ ನಾಮ

ರಕ್ಷಿತ್. ರೈ. ಪುಂಡಿಕಾಯಿ
ತೃತೀಯ ಪತ್ರಿಕೋದ್ಯಮ

ಬಸ್ ಲೇಟ್ ಎಂದರೇನು..?
ಬಸ್ ಇದ್ದೂ ಕ್ಲಾಸಿಗೆ ಲೇಟಾಗಿ
ಬರೋದನ್ನು ಬಸ್ ಲೇಟ್ ಎನ್ನುವರು.

## ನಗು – ಅಳು

ಗುಂಡ: ಲೋ ತಿಮ್ಮ ನಿನ್ನೆ ನನ್ನ ಅಜ್ಜಿ ಬಾವಿಗೆ ಬಿದ್ದು ತುಂಬಾ ಕೂಗ್ತಾ ಇದ್ರು ಕಣೋ.
ತಿಮ್ಮ: ಹೌದೇನೋ ಈಗ ಹೇಗಿದ್ದಾರೆ..?
ಗುಂಡ: ಈಗ ಬಹುಶಃ ಚೆನ್ನಾಗಿ ಇರ್ಬೇಕು. ಬಾವಿಯಿಂದ ಯಾವುದೇ ಸದ್ದು ಬರ್ತಾ ಇಲ್ಲ.

# ನಯನಗಳಿಂದ ಜಿನುಗುವ ಕಂಬನಿ ಪಾವಿತ್ರ್ಯಕ್ಕೆ ಸಾಕ್ಷಿ

**ದುಃಖ ತರಿಸಿದ ವ್ಯಕ್ತಿಗೆ ಯಕಶ್ಚಿತ್ ಹನಿ ಕಣ್ಣೀರು ಮುಂದೊಂದು ದಿನ ಶಾಪವಾಗಿ ಆತನ ಬದುಕನ್ನು ಸರ್ವನಾಶ ಮಾಡುತ್ತದೆ. ಪರರನ್ನು ಅಳಿಸಿದ ಪರಿಣಾಮ ತಾವೆ ಕಂಬನಿಗರೆಯುವ ಸಂದರ್ಭ ಬಂದಾಗ ಆ ಹನಿಗಳಿಗೆ ಯಾವ ಬೆಲೆಯೂ ಇಲ್ಲ.**

ಕಂಬನಿಗೆ ಭಾವನೆಗಳ ಬವಣೆಯೊಂದೇ ಕಾರಣವಲ್ಲ. ಪ್ರತಿಯೊಂದು ಬಗೆಯ ಭಾವನೆಗಳು ತುಸು ಹೆಚ್ಚಾದರೂ ಕಣ್ಣಿಂದ ಬಳಬಳನೆ ಕಂಬನಿ ಒತ್ತರಿಸುತ್ತದೆ. ಆನಂದ ಭಾಷ್ಪವೆಂದು ಕರೆಯಲ್ಪಡುವ ಕಣ್ಣೀರು ಉದ್ಭವಿಸುವುದು ಸಂತೋಷಕರ ವಿಚಾರ ಉತ್ತುಂಗಕ್ಕೇರಿದಾಗ. ಸಂಭವಿಸುವುದು ಕಷ್ಟವೆಂದು ಭ್ರಮಿಸಿ ಕೈಚೆಲ್ಲಿದ ಕಾರ್ಯ ಕೈಗೂಡಿದಾಗ ಸಂಭ್ರಮ ಕಂಬನಿಯಾಗಿ ಮೇಳೈಸುತ್ತದೆ. ಸಮತೋಲನ ಕಂಡುಕೊಳ್ಳುವ ವಿಧಾನವೂ ಹೌದು. ಕಸ ಬಿದ್ದಾಗ, ಪೆಟ್ಟಾದಾಗ ಬರುವ ಕಣ್ಣೀರು ನೋವಿನಿಂದಲೇ ಬಂದಿದುದಾದರೂ ಅದು ಬಾಹ್ಯ. ಪ್ರಾಣಿಗಳೂ ಕೂಡಾ ಮೂಖ ದನಿಯಲ್ಲಿ ರೋದನೆ ಮಾಡುತ್ತಿರುವ ದೃಶ್ಯ ಕಾಣಬಹುದು. ಬಹುಶಃ ಪ್ರಾಣಿ ಪ್ರಿಯರಿಗಷ್ಟೇ ತಿಳಿದಿದೆಯೇನೋ. ಮಾನವನ ಅತಿಕ್ರಮಣದಿಂದ ಬುವಿಯೂ ಕಣ್ತುಂಬಿಕೊಂಡು ಬಿಕ್ಕಳಿಸುವುದು ಸೂಕ್ಷ್ಮ ಕಿವಿಗಳಿಗಷ್ಟೇ ಕೇಳಿಸುತ್ತದೆ. ಬೇಗುದಿ ಹೆಚ್ಚಾದಾಗ ಬಿಡುವ ನಿಟ್ಟುಸಿರು ಭೂಕಂಪ, ಪ್ರಳಯ, ಪ್ರವಾಹವಾಗಿ ಸಂಭವಿಸುವುದಿದೆ. ತನ್ನ ಮಕ್ಕಳೆಂಬ ಮಮಕಾರದಿಂದ ಕಂಬನಿ ಸುರಿಸದೆ ದುಃಖವನ್ನೆಲ್ಲಾ ಸಹಿಸಿಕೊಳ್ಳುತ್ತಿರುವ ಮಮತಾಮಯಿ. ಸಹನೆಗೂ ಒಂದು ಮಿತಿಯಿದೆ. ಸ್ಫೋಟವಾದರೆ ಮಾನವ ನಿರ್ಮಿತ ಅಣುಬಾಂಬಿಗಿಂತಲೂ ಭಯಂಕರ. ಒಂದು ಬಿಂದು ಕಂಬನಿಯ ಪರಿಣಾಮದಿಂದ ಅವನತಿ ಸಾಧ್ಯ. ತಾಯಿಯ ಕಣ್ಣಲ್ಲಿ ನೀರು ತರಿಸಿದ ಮಕ್ಕಳು ಭವಿಷ್ಯದಲ್ಲಿ ಉದ್ಧಾರ ಆಗುವುದಿಲ್ಲ ಎಂಬ ವಾಡಿಕೆಯ ಮಾತಿದೆ. ಅಕ್ಷರಶಃ ಸತ್ಯ. ಹೆಣ್ಣಿನ ಮನಸ್ಸಿಗೆ ಆಘಾತವಾಗುವಂತ ದುಷ್ಕೃತ್ಯ ಎಸಗಿದವನ ಬಾಳು ಬಂಗಾರವಾದ ಉದಾಹರಣೆಯಿಲ್ಲ. ಬದಲಿಗೆ ಬರಡಾಗಿ ಮಣ್ಣು ಪಾಲಾದ ನಿಮಿತ್ತಗಳೇ ಹೆಚ್ಚು. 'ಅಳುವ ಪುರುಷ ನಂಬಿಕೆಗೆ ಅರ್ಹವಲ್ಲ' ಎಂಬ ಮಾತಿದೆ. ದುಃಖವನ್ನು ಹರಿಯ ಬಿಡಬಾರದು, ಸಮಸ್ಯೆ ಮೆಟ್ಟಿ ನಿಲ್ಲಬೇಕು ಎಂಬ ತಾತ್ಪರ್ಯದಲ್ಲಿ. ಆದರೆ ವಾಕ್ಯ ಮಾತ್ರ ವ್ಯಾಕಲನದ ಚಿಂತನೆಯಿಂದ ಬಂದುದಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ದುಃಖ ಮರೆಯಲು ಅತ್ತು ಬಿಡುವುದೊಂದೇ ದಾರಿ. ಅಳುವುದಕ್ಕೆ ಹೆಣ್ಣು ಗಂಡು ಎಂಬ ಭೇದವೇಕೆ? ಅತ್ತರೆ ಸಮಸ್ಯೆ ಇತ್ಯರ್ಥವಾಗುತ್ತದೆ ಎಂದರ್ಥವಲ್ಲ. ಆದರೆ ಮನಸ್ಸು ಹಗುರಾಗಿ ಪರಿಹಾರ ಹುಡುಕಲು ಸಾಧ್ಯ.



**ಸಂಗತಿ – ಸಂಗಾತಿ**

• ಸರಸ್ವತಿ ಸಿ.ಕೆ
ಉಪನ್ಯಾಸಕರು, ಇಂಗ್ಲೀಷ್ ವಿಭಾಗ,
ವಿವೇಕಾನಂದ ಕಾಲೇಜು

ಸಾಧಕರು ಎಂಬ ಪರಿಪಾಠದಲ್ಲಿ ಅಳಲನ್ನು ತೋಡಿಕೊಳಲಾಗದೆ, ನಿರ್ಭಾವುಕರಾಗಿ 'ಎಲ್ಲವನ್ನೂ ಸಮಾನತೆಯಿಂದ ಸ್ವೀಕರಿಸುತ್ತೇವೆ ಎನ್ನುತ್ತಾರೆ. ಸುಖ ದುಃಖವನ್ನು ಬ್ಯಾಲೆನ್ಸ್ ಮಾಡುವ ಹುಂಬತನದಲ್ಲಿ ನಗಲಾರದೆ, ಅಳಲಾರದೆ ಮಾನಸಿಕ ಜಂಜಾಟದಲ್ಲಿ ತೊಳಲಾಡಿ ತೊಪ್ಪೆಯಾಗುವ ಬದುಕೂ ಒಂದು ಬದುಕೆ? ನೇರ ಮಾತು, ಭಾವನೆಗೆ ಬೆಲೆ ಇರಲಿ. ಅದು ಪ್ರಕೃತಿ ಸಹಜ. ತಡೆಗಟ್ಟಲು ಅನುವಾದರೆ ನೋವು ಖಚಿತ. ಮನಸ್ಸಲ್ಲಿ ದುಃಖವನ್ನು ಅದುಮಿಟ್ಟರೆ ಇಂತಹ ಯಾತನೆ ಸಂಭವಿಸುವುದು ಗ್ಯಾರಂಟಿ.! ಆನಂದ ಭಾಷ್ಪ ಮುತ್ತುಗಳಾಗಿ, ದುಃಖ ಪೂರಿತ ಭಾಷ್ಪ ಇಬ್ಬನಿಯಾಗಿ ತಳತಳಿಸುತ್ತವಂತೆ. ಪ್ರಾಕೃತಿಕವಾಗಿ ಬಂದ ಕಣ್ಣೀರಾದ್ದರಿಂದ ಪ್ರಕೃತಿಯಲ್ಲೇ ಲೀನವಾಗುತ್ತದೆ. ದುಃಖ ತರಿಸಿದ ವ್ಯಕ್ತಿಗೆ ಯಕಶ್ಚಿತ್ ಹನಿ ಕಣ್ಣೀರು ಖಂಡಿತ ಮುಂದೊಂದು ದಿನ ಶಾಪವಾಗಿ ಆತನ ಬದುಕನ್ನು ಸರ್ವನಾಶ ಮಾಡುವಷ್ಟು ಪ್ರಭಾವಶಾಲಿ. ಹೇಳುವುದಿಷ್ಟೆ, ಮನಸಾರೆ ಅತ್ತು ಬಿಡೋಣ. ಪರರನ್ನು ಅಳಿಸುವ ಪ್ರಯತ್ನದಿಂದ ದೂರವಿರೋಣ. ಪರರನ್ನು ಅಳಿಸಿದ ಪರಿಣಾಮ ಮುಂದೊಂದು ದಿನ ತಾವೆ ಕಂಬನಿಗರೆಯುವ ಸಂದರ್ಭ ಬಂದಾಗ ಆ ಹನಿಗಳಿಗೆ ಯಾವ ಬೆಲೆಯೂ ಇಲ್ಲ. ಯಕಶ್ಚಿತ್ ನೀರಗುಳ್ಳೆಗೆ ಸಮ!

### ಕಣ್ಣೀರಾಯಣ!

ರಾವಣ ಮೋಸದಿಂದ ಸೀತೆಯನ್ನು ಅಪಹರಿಸಿ ಅಶೋಕವನದಲ್ಲಿ ಬಂದಿಸಿದಾಗ ಅತ್ತು ಗೋಗರೆದು ಬಿಡೆಂದಳು. ಅಟ್ಟಹಾಸದ ಮೆರುಗಲ್ಲಿ ಆಕೆಯ ಕಣ್ಣೀರಿಗೆ ಬೆಲೆ ನೀಡದೆ ವರಿಸೆಂದು ಹಠಕ್ಕೆ ಬಿದ್ದನು. ಪತಿವ್ರತೆಯ ಕಣ್ಣೀರು ಸುಡುವ ಬೆಂಕಿಯಾಗದೇ ಬಿಟ್ಟೀತೆ? ಸೀತೆಯ ಒಂದೊಂದು ಕಣ್ಣ ಹನಿಗೂ ರಾವಣ ಸೈನ್ಯದ ನೂರಾರು ರಾಕ್ಷಸರು ಬಲಿಯಾದರು. ಕೊನೆಗೆ ಬರೋಬ್ಬರಿ ಇಪ್ಪತ್ತು ಕಣ್ಣಿದ್ದರೂ ಒಂದು ಹನಿ ಪಶ್ಚಾತ್ತಾಪದ ಕಣ್ಣೀರು ಸುರಿಸದೆ ಮಣ್ಣಾಗಿ ಹೋದ. ರಾಮನು ಪರರ ಮಾತಿಗೆ ಶೀಲ ಶಂಕಿಸಿ ಸೀತೆಯನ್ನು ಅಗ್ನಿಕುಂಡದಲ್ಲಿ ನಿಲ್ಲಿಸಿದ. ಪತಿವ್ರತೆಯ ಕಂಬನಿ ಅಗ್ನಿಯನ್ನು ಆರಿಸಿಬಿಟ್ಟಿತು. ಕೊನೆಗೆ ಸುಟ್ಟಿದ್ದು ರಾಮನ ಮನಸ್ಸನ್ನು. ಸೀತೆಯನ್ನು ಕಾಡಿಗಟ್ಟಿದ ಸಂದರ್ಭ ಲಕ್ಷ್ಮಣ ಸುರಿಸಿದ ಮಮತೆಯ ಹಾಗೂ ಪಶ್ಚಾತಾಪದ ಕಣ್ಣೀರು, ಮಾಡಿದ ತಪ್ಪನ್ನು ಕ್ಷಮಿಸುವಂತಾಯಿತು. ಸೀತೆಯ ಕಣ್ಣೀರು ಬಹುಶಃ ರಾಮನು ಲವ–ಕುಶರೊಡನೆ ಯುದ್ಧ ಮಾಡಬೇಕಾದ ವಿಪರ್ಯಾಸಕ್ಕೆ ಶಾಪವಾಯಿತೇನೋ. ನಯನಗಳಿಂದ ಜಿನುಗುವ ಕಂಬನಿ ಪಾವಿತ್ರತೆಗೆ ಸಾಕ್ಷಿ. ಪಾವಿತ್ರತೆಗೆ ಧಕ್ಕೆಯಾದರೆ ಪ್ರಳಯವಾಗದೆ ಇದ್ದೀತೆ? ಕೌಸಲ್ಯ ಮತ್ತು ದಶರಥರ ಪುತ್ರ ಶೋಕಕ್ಕೆ ಕೈಕೇಯಿ ಮಗನಿಂದಲೇ ತಿರಸ್ಕೃತಗೊಂಡಳು. ಮಂಥರೆ ಪ್ರಪಂಚದಾದ್ಯಂತ ನಿಂದನೆಗೆ ಒಳಪಟ್ಟಳು. ಸುಗ್ರೀವನಿಗೆ ನ್ಯಾಯ ಒದಗಿಸುವ ಸಲುವಾಗಿ ಅನ್ಯಾಯವಾಗಿ ವಾಲಿಯನ್ನು ಕೊಂದ ರಾಮನಿಗೆ ಶಾಪ ತಟ್ಟಿದ್ದು ನಿಜ. ಕಂಬನಿ ಕೇವಲ ನಯನಗಳಿಂದ ಬೀಳುವ ಹನಿಗಳು ಮಾತ್ರವಲ್ಲ. ಬಹುಶಃ ಪುರಾಣ ಕಥೆಗಳ ತಿರುವಿಗೆ ಸಾಕ್ಷಿಯಾದ ಪುಳಕಗಳು. ಬಹು ದೊಡ್ಡ ನಿರೀಕ್ಷೆಯೆಡೆಗೆ ಪುರಾಣವನ್ನು ಕೊಂಡೊಯ್ದ ಸಾಧನ ಈ ಕಣ್ಣೀರು.

### ಕಣ್ಣೀರ ರಥ ಮಹಾಭಾರತ!

ಮಹಾಭಾರತವನ್ನು ನೋಡಹೊರಟರೆ ಇಡೀ ಪ್ರಸಂಗವೇ ಒಂದು ಹನಿ ದ್ರೌಪದಿಯ ಕಣ್ಣೀರಿಂದ ನಡೆದುದಾಗಿದೆ ಎಂದರೆ ಆಭಾಸವಲ್ಲ. ಕುರುಕ್ಷೇತ್ರ ಯುದ್ಧ ನಡೆಯುವ ಮುನ್ನ ಕೃಷ್ಣ ಸಂಧಾನಕಾರನಾಗಿ ಕೌರವನ ಹತ್ತಿರ ಹೋಗುವ ಸಂದರ್ಭ. ಬಹುಶಃ ಕೃಷ್ಣ ಸಂಧಾನದಲ್ಲಿ ಯಶಸ್ವಿಯಾಗುತ್ತಾನೆ ಎಂಬ ಭರವಸೆ ಎಲ್ಲರಲ್ಲೂ ಇತ್ತು. ಯುದ್ಧ ನಡೆಯದು ಎಂಬ ವಿಶ್ವಾಸ ಮನೆಮಾಡಿತ್ತು. ಸಹಜವಾಗಿಯೇ ಕೃಷ್ಣ ಆ ಮಟ್ಟಿನ ಪ್ರಭಾವಶಾಲಿ. ದಾರಿಯಲ್ಲಿ ಆಕಸ್ಮಿಕವಾಗಿ ಭೇಟಿಯಾದ ದ್ರೌಪದಿ ಕೃಷ್ಣನ ಪ್ರಯಾಣದ ಕಾರಣ ಕೇಳುತ್ತಾಳೆ. ಸಂಧಾನದ ನಿಮಿತ್ತ ಕೌರವನಲ್ಲಿಗೆ ಹೋಗುತ್ತಿರುವ ಮರ್ಮ ಅರಿತು ವ್ಯಥೆಯಿಂದ 'ಕೃಷ್ಣ ನನ್ನ ಸಂಕಟ ನಿನಗೂ ಅರ್ಥವಾಗದೆ ಹೋಯಿತೆ?' ಎಂದಾಗ ಕೇಶವನ ಕಾಲ ಮೇಲೆ ದ್ರೌಪದಿಯ ಒಂದು ಹನಿ ಕಂಬನಿ ತೊಟ್ಟಿಕ್ಕುತ್ತದೆ. ಆ ಒಂದೇ ಒಂದು ಹನಿ ಕಣ್ಣೀರಿಗೆ ಮಿಡಿದ ಮಾಧವ ಸಂಧಾನ ವಿಫಲವಾಗುವಂತೆ ಮಾಡುತ್ತಾನೆ. ಪತಿವ್ರತೆ, ಪಾವಿತ್ರತೆಯ ಪ್ರತೀಕವಾದ ದ್ರೌಪದಿಯ ಆ ಒಂದೇ ಒಂದು ಕಂಬನಿಗೆ ನೂರು ಜನ ಕೌರವರು ನಾಶವಾಗುತ್ತಾರೆ. ಎಂದೂ ಮಾಸದ ರಕ್ತಪಾತಕ್ಕೆ ಕುರುಕ್ಷೇತ್ರ ಸಾಕ್ಷಿಯಾಗುತ್ತದೆ.

ಕೌರವರ ತಾಯಿ ಗಾಂಧಾರಿಯ ಕಣ್ಣೀರ ಕಥೆ ನಿಜವಾಗಿಯೂ ವ್ಯಥೆಯನ್ನು ಒತ್ತರಿಸುವಂತಿದೆ. ಪೂರ್ವ ನಿರ್ಧರಿತ ಕೃತ್ಯಕ್ಕೆ ಬಲಿಯಾಗಿ ಕುರುಡನನ್ನು ಮದುವೆಯಾದ ಹತಭಾಗ್ಯೆ. ದೃಥರಾಷ್ಟ್ರನನ್ನು ಮದುವೆಯಾಗಲು ಒಪ್ಪದಿದ್ದಾಗ ಭೀಷ್ಮ ಬಲವಂತವಾಗಿ ಆಕೆಯನ್ನು ಹಸ್ತಿನಾವತಿಗೆ ಎಳೆದು ತರುತ್ತಾನೆ. ವಿರೋಧಿಸಿದ ಆಕೆಯ ನೂರು ಸಹೋದರರನ್ನು ಸೋಲಿಸಿ ಹೆಡೆಮುರಿ ಕಟ್ಟಿ, ಬಂಧಿಖಾನೆಯಲ್ಲಿ ಸೆರೆಯಾಳಾಗಿಸುತ್ತಾನೆ. ಒಬ್ಬನಿಗೆ ಒಂದು ಹೊತ್ತಿಗೆ ಮಾತ್ರ ಸಾಕಾಗುವಷ್ಟು ಆಹಾರವನ್ನಷ್ಟೇ ನೀಡುವಂತೆ ವ್ಯವಸ್ಥೆ ಮಾಡುತ್ತಾನೆ. ಗಾಂಧಾರ ರಾಜ್ಯದ ರಾಜಕುಮಾರಿಯನ್ನು ಹಸ್ತಿನಾವತಿಯ ರಾಜನಿಗೆ ಮದುವೆ ಮಾಡಿಕೊಡುವ ಒಡಂಬಡಿಕೆ ಹಿಂದಿನಿಂದ ಚಾಲ್ತಿಯಲ್ಲಿರುತ್ತದೆ. ಪೂರ್ವ ನಿಯೋಜಿತ ಕರ್ತವ್ಯವನ್ನೇನೋ ಭೀಷ್ಮ ಹಠಕ್ಕೆ ಬಿದ್ದಂತೆ ಯಶಸ್ವಿಯಾಗಿ ಮಾಡಿಮುಗಿಸುತ್ತಾನೆ. ಆದರೆ ಜೀವನ ಪರ್ಯಂತ ಕಣ್ಣೀರು ಹಾಕಿದವಳು ಮಾತ್ರ ಗಾಂಧಾರಿ. ಸೌಂದರ್ಯವತಿ ಗಾಂಧಾರಿ ಕುರುಡ ಗಂಡನನ್ನು ನೋಡುವುದಿಲ್ಲ ಎಂದು ಕಣ್ಣಿಗೆ ಬಟ್ಟೆ ಕಟ್ಟಿಕೊಳ್ಳುತ್ತಾಳೆ. ಬಹುಶಃ ಆಕೆಯ ಕಣ್ಣೀರು ಕಟ್ಟಿದ ಬಟ್ಟೆಯಲ್ಲಿ ಲೀನವಾಗುತ್ತಿರಬೇಕು. ಗಂಡ ನೋಡದ ಜಗತ್ತನ್ನು ನೋಡಬಯಸದ ಗಾಂಧಾರಿ ಮಹಾಪತಿವ್ರತೆ ಅಂತಲೇ ಹಲವರು ಗುರುತಿಸುತ್ತಾರೆ. ಅದೇನೆ ಇರಲಿ, ಆಕೆಯ ಕಣ್ಣೀರಿನ ಪರಿಣಾಮ ಸಾಕಷ್ಟು ಅಲ್ಲೋಲ ಕಲ್ಲೋಲವನ್ನೇ ಸೃಷ್ಟಿಸಿಬಿಟ್ಟಿತು.

ಗಾಂಧಾರೆಯ ತೊಂಬತ್ತೊಂಬತ್ತು ಸಹೋದರರ ಸಾವಿಗೆ ಕಾರಣ ಕರ್ತನಾದ ಭೀಷ್ಮನ ಕುರಿತು ಆಕೆಗೆ ಅಸಹನೆಯ ದ್ವೇಷವಿತ್ತು. ತನ್ನ ಬದುಕನ್ನು ನರಕವಾಗಿಸಿದ ಬಗೆಗೆ ಖೇದವಿತ್ತು. ಇದರ ಪರಿಣಾಮವಾಗಿ ಒತ್ತರಿಸಿದ ಕಣ್ಣೀರು ಶಾಪವಾಗಿ ಭೀಷ್ಮನನ್ನು ತಟ್ಟಿತು. ಮನಸ್ಸಿಲ್ಲದೆ ಕೌರವನ ಪಕ್ಷ ವಹಿಸಿ ಯುದ್ಧ ಮಾಡಬೇಕಾಯಿತು. ಕೃಷ್ಣನ ವಿರುದ್ಧ ನಿಲ್ಲಬೇಕಾಯಿತು. ತನ್ನ ಮೊಮ್ಮಕ್ಕಳಿಂದಲೇ ಹತನಾಗಬೇಕಾದ ಅಮಾನವೀಯತೆ ಬಂದೊದಗಿತು. ಅಕ್ಕನ ಕಣ್ಣೀರು, ಸಹೋದರರ ಸಾವು ಶಕುನಿಗೆ ಹಸ್ತಿನಾವತಿಯ ರಾಜ ಪರಂಪರೆಯನ್ನೇ ಹಾಳುಗೆಡವಲು ಪುಷ್ಠಿ ನೀಡಿತು. ಧುರ್ಯೋದನನಲ್ಲಿ ದುರುಳತೆ ತುಂಬಿ ತನ್ನ ಬಯಕೆ ಈಡೇರಿಕೆಗೆ ದಾಳವಾಗಿ ಉಪಯೋಗಿಸಿದ. ಬಲಗೈ ಹೆಬ್ಬೆರಳು ಕಳೆದುಕೊಂಡ ಏಕಲವ್ಯನನ್ನು ನೋಡಿ ದುಃಖಿಸಿದ ಆತನ ತಾಯಿಯ ಕಂಬನಿಗೆ ಪ್ರತಿಯಾಗಿ ದ್ರೋಣನಿಗೆ ಶಾಪವಾಗಿ ಪರಿಣಮಿಸಿತು. ಅರ್ಜುನನನ್ನು ಶಾಪ ಹಿಂಬಾಲಿಸಿದ್ದೂ ಸುಳ್ಳಲ್ಲ. ಮೆಚ್ಚಿನ ಶಿಷ್ಯರ ವಿರುದ್ಧವೇ ಕಾದಾಡಬೇಕಾದ ಅನಿವಾರ್ಯತೆಗೆ ದ್ರೋಣ ಒಳಗಾದರು. ಜಗತ್ತಿಗೆ ಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡಿದ ತನ್ನ ಗುರುವಿನ ವಿರುದ್ಧವೇ ಬಾಣ ಪ್ರಯೋಗಿಸುವ ವಿಪರ್ಯಾಸ ಅರ್ಜುನನ ಜೀವನದಲ್ಲಿ ಘಟಿಸಿತು. ಸೋಲು, ಹತಾಶೆಯಿಂದ ದುಃಖಿತನಾದ ಹಠವಾದಿ ದುರ್ಯೋಧನನ ಕಣ್ಣ ಹನಿಗೆ ಅಶ್ವತ್ಥಾಮನಿಂದ ನವ ಪಾಂಡವರ ಮಾರಣ ಹೋಮವಾಗುತ್ತದೆ. ನೂರು ಸಹೋದರರನ್ನು, ನೂರು ಮಕ್ಕಳನ್ನು ಕಳೆದುಕೊಂಡ ಮಹಾಮಾತೆ ಗಾಂಧಾರಿ ಮತ್ತೆ ಕಣ್ಣೀರಿಡುತ್ತಾಳೆ. ಆ ಕಣ್ಣೀರು ನೇರವಾಗಿ ಕೃಷ್ಣನನ್ನೇ ತಟ್ಟುತ್ತದೆ. ಯಾದವ ವಂಶಜರನ್ನು ತಾನೇ ತಂತ್ರ ಹೂಡಿ ಪರಸ್ಪರ ಯುದ್ಧಮಾಡುವಂತೆ ಪ್ರೇರೇಪಿಸುತ್ತಾನೆ. ಅವರ ನಾಶದೊಂದಿಗೆ ತನ್ನ ಅವಸಾನವನ್ನೂ ಸಮೀಪಿಸುತ್ತಾನೆ. ಯಕಶ್ಚಿತ್ ಒಬ್ಬ ಬೇಡನ ಆಕಸ್ಮಿಕ ಬಾಣಕ್ಕೆ ತುತ್ತಾಗಿ ಕಣ್ಮರೆಯಾಗುತ್ತಾನೆ.

## ಅಳವಡಿಸಿ ನೋಡಿ

ನಮ್ಮನ್ನು ದ್ವೇಷಿಸುವ ಜನರನ್ನು ದ್ವೇಷಿಸುವುದಕ್ಕಾಗಿ ನಮ್ಮ ಸಮಯವನ್ನು ವ್ಯರ್ಥ ಮಾಡುವ ಬದಲು ಅದನ್ನು ಬೇರೆಡೆ ವಿನಿಯೋಗಿಸಿ.

## ಎಂಥಾ ಮಾತು??!!

ಡಾಕ್ಟರ್ ಹೇಳಿದ್ರು, ಸಾಕಷ್ಟು ನಿದ್ರೆ ಮಾಡು ಅಂತ. ಅದ್ಕೆ ಇತ್ತೀಚೆಗೆ ಸಿನ್ಸಿಯರ್ ಆಗಿ ಕ್ಲಾಸ್‌ಗೆ ಹೋಗ್ತಿದ್ದೀನಿ

– ಬಂಕ್ ಸೀನ.

## ಮಾಹಿತಿ

ವಿವೇಕಾನಂದ ಕಾಲೇಜಿನ ಸಮಗ್ರ ಮಾಹಿತಿಗಾಗಿ ಕಾಲೇಜಿನ ಅಂತರ್‌ಜಾಲ ತಾಣವಾದ vc.vivekanandaedu.org ಇಲ್ಲಿ ಪಡೆಯಬಹುದು.

ಪತ್ರಿಕೆಯು ಒಳಗೊಂಡಿರುವ ವಿಚಾರಗಳ ಕುರಿತಾಗಿ ಪ್ರತಿಕ್ರಿಯೆ, ಸಲಹೆ, ಸೂಚನೆಗಳನ್ನುಈ ವಿಳಾಸಕ್ಕೆ ಕಳುಹಿಸಿ. ನಮ್ಮ ವಿಳಾಸ:
**ವಿಕಸನ, ತೃತೀಯ ಪತ್ರಿಕೋದ್ಯಮ ವಿಭಾಗ, ವಿವೇಕಾನಂದ ಕಾಲೇಜು, ನೆಹರೂ ನಗರ, ಪುತ್ತೂರು, ದಕ್ಷಿಣ ಕನ್ನಡ.574203**
ಮಿಂಚಂಚೆ: vikasana.vc@gmail.com